# ಆರ್ತನಾದವನ್ನು ಏನು ಮಾಡುವಿರಿ!

ಅಮೇರಿಕೆಯ ಚಿಕಾಗೋ ನಗರದಲ್ಲಿ ಒಂದು ಪ್ರಸಿದ್ಧ Abattoir– ಪ್ರಾಣಿ ವಧಾಗೃಹ ಇದೆಯಂತೆ. ನಿತ್ಯವೂ ಸಾವಿರಾರು ದನ, ಹಂದಿ, ಕುರಿಗಳು ವಧೆಯಾಗುವ ಜಾಗ ಇದು. ಅದೆಷ್ಟು ವೈಜ್ಞಾನಿಕವಾಗಿ ಈ ಸಾವಿರಾರು ಹತ್ಯೆಗಳನ್ನು ಇಲ್ಲಿ ನೆರವೇರಿಸುತ್ತಾರೆಂದರೆ, ಒಂದು ಹನಿ ರಕ್ತವೂ ಒಂದು ತುಣುಕು ಮಾಂಸವೂ ಮೂಳೆಯ ಒಂದು ತುಂಡೂ ಕೂಡ ಭೂಮಿಗೆ ಚೆಲ್ಲಿ ಹೋಗದಂತೆ, ಎಲ್ಲಿಯೂ ಯಾವ ಕೊಳಕೂ ಇಲ್ಲದೇ ಅಷ್ಟು ಸ್ವಚ್ಛವಾಗಿ ನೋಡುವ ಕಣ್ಣಿಗೆ ಹಬ್ಬವಾಗುವಂತೆ, ಈ ವಧಾ ಗೃಹವನ್ನು ನಿರ್ವಹಿಸುತ್ತಾರಂತೆ. ಇದು ಅವರ ಹೆಮ್ಮೆ! ಇಲ್ಲಿ ದೊಡ್ಡ ಅಕ್ಷರಗಳಲ್ಲಿ ಬರೆದಿಟ್ಟ ಒಂದು ಉಲ್ಲೇಖ ಇದೆಯಂತೆ. Everything is utilised here ಇದು ಆ ಉಲ್ಲೇಖ, ಪ್ರಾಣಿಯ ದೇಹದ ಪ್ರತಿಯೊಂದು ಅಂಗವೂ ಕೂದಲಿನಿಂದ ಕೊಂಬಿನ ತನಕ ಒಡಲೊಳಗಿನ ಸಪ್ತಧಾತುಗಳೂ ಕೂಡ ಎಲ್ಲವೂ ಇಲ್ಲಿ ಎಲ್ಲಿಯೂ ನಷ್ಟವಾಗದೆ ಬಳಕೆಯಾಗುತ್ತದೆ ಎನ್ನುವುದು ಈ ಉಲ್ಲೇಖದ ಅರ್ಥ. ಇದು Zero waste Technology. ಸಾವಿರಾರು ಮಂದಿ ಈ ಪ್ರಸಿದ್ಧ ವಧಾಗೃಹವನ್ನು ನೋಡಲೆಂದೇ ಬರುವರು. ನೋಡಿ ಬೆರಗಾಗುವರು. ಇಲ್ಲಿರುವ ಸಂದರ್ಶಕರ ಪುಸ್ತಕದಲ್ಲಿ ತಮ್ಮ ಪ್ರತಿಕ್ರಿಯೆಗಳನ್ನು ನಮೂದಿಸುವರು. ಸಾಮಾನ್ಯವಾಗಿ ಈ ಪ್ರತಿಕ್ರಿಯೆಗಳು ಬೆರಗಿನ; ಪ್ರಶಂಸೆಯ ಉದ್ಗಾರಗಳು! ಒಂದು ದಿನ ವಿಲಕ್ಷಣವಾದ ಪ್ರತಿಕ್ರಿಯೆಯೊಂದು ಪುಸ್ತಕದಲ್ಲಿ ಕಾಣಿಸಿಕೊಂಡು ಅಧಿಕಾರಿಗಳು ಏನಿದರ ಅರ್ಥ ಎಂದು ತಬ್ಬಿಬ್ಬುಗೊಂಡರಂತೆ. ಆ ಪ್ರತಿಕ್ರಿಯೆ ಹೀಗಿತ್ತು: 'You claim everything is utilised here. OK. What about the last–cry'

What about the last–cry ಈ ಮಾತು ಒಂದು ಆರ್ತನಾದದಂತೆ ಆಳವಾಗಿ ಇರಿಯುತ್ತ ಕಾಡುತ್ತಿದೆ. ಎಲ್ಲ ಸ್ವಚ್ಛವಾಗಿದೆ. ಅತಿಸ್ವಚ್ಛ. ವೈಜ್ಞಾನಿಕ ಸ್ವಚ್ಛತೆ. ವಧೆ ನಡೆದ ಕುರುಹೇ ಇಲ್ಲ. ಆದರೂ ಅಲ್ಲಿ ಕೇಳಬಲ್ಲವರಿಗೆ ಆರ್ತನಾದವೊಂದು ಕೇಳಿಸಬಹುದು. ನಿಸರ್ಗ, ಆರ್ತನಾದವನ್ನು ಆರ್ತನಾದವನ್ನಾದರೂ– ಉಳಿಸುತ್ತದೆ. ಎಲ್ಲವನ್ನೂ ನಿಶೇಷ ಮಾಡುವುದನ್ನು ನಿಸರ್ಗ ಒಪ್ಪದು.

ಒಂದು ಆರ್ತನಾದವಾದರೂ ಉಳಿದರೆ ಸಾಕು. ಅದು ಕೇಳಬಲ್ಲವರಿಗೆ ಕೇಳಿಸಿಯೇ ಕೇಳಿಸುತ್ತದೆ. ಅದರಿಂದ ಒಂದು ಮಹಾಕಾವ್ಯವೇ ಮೂಡಿಬರಬಹುದು. ಅದರಿಂದ ಜನಾಂಗದ ಸಂವೇದನೆಯೇ ಬದಲಾಗಬಹುದು. ಕ್ರೌಂಚದ ಅಳಲಿನಿಂದ ರಾಮಾಯಣ ಮೂಡಿ ಬಂದಂತೆ!

ಎರಡನೇ ಮಹಾಯುದ್ಧದಲ್ಲಿ ಜಪಾನಿನ ಹಿರೋಶಿಮಾದ ಮೇಲೆ ಬಹಳ ಎತ್ತರದಿಂದ ಅಮೇರಿಕಾ ಅಣುಬಾಂಬ್ ಎಸೆಯಿತಲ್ಲ... ಆಹಾ ಮನುಷ್ಯ ಆಗಸದ ಎತ್ತರಕ್ಕೇರಿದುದರ ಫಲವೇ! ಆ ಜಾಗದುದ್ದಕ್ಕೆ ಜೀವದ ಕುರುಹೆಲ್ಲವೂ ಸುಟ್ಟು ಕರಕಲಾಯಿತಲ್ಲ! ಕೆಲಕಾಲ ಕಳೆದು ವಿಜ್ಞಾನಿಗಳ ತಂಡವೊಂದು ಜೀವದ ಕುರುಹೇನಾದರೂ ಈ ಮಾರಕ ವಿಕಿರಣಗಳ ನಡುವೆ ಉಳಿದಿರಬಹುದೆ ಎಂದು ಶೋಧಿಸುತ್ತಿದ್ದರು. ಏನೂ ಉಳಿದಿರಲಿಲ್ಲ. ಶೋಧಿಸುತ್ತಿದ್ದಂತೆ ಕೊನೆಗೂ ಜೀವದ ಕುರುಹೊಂದು ಈ ನಿರ್ಜೀವ ನರಕದ ನಡುವೆ ಕಾಣಸಿಕ್ಕಿತು. ಅದೇಂದರೆ ಬಿದಿರಿನ ಸಣ್ಣದೊಂದು ಮೊಳಕೆ! ಅದನ್ನು ನೋಡುತ್ತಿದ್ದಂತೆ ಪುಳಕಿತನಾದ ವಿಜ್ಞಾನಿ ಅದರತ್ತ ಕೈಮಾಡಿ ಇತರರಿಗೆ ಹೇಳಿದ್ದು: At last– a bamboo shoot ಬಿದಿರು; ಹುಟ್ಟು ಸಾವಿನಲ್ಲಿ ನಮ್ಮ ತೊಟ್ಟಿಲಲ್ಲವೆ! ನಿಶೇಷ ಮಾಡುವುದನ್ನು ನಿಸರ್ಗ ಒಪ್ಪದು.

What about the last cry ಎಂಬ ಮಾತು ತಂತ್ರಜ್ಞಾನಕ್ಕೆ ಎಂದೂ ಹೊಳೆಯದು. ಆದುದರಿಂದಲೇ ಈ ಮಾತು ಅದಕ್ಕೆ ಅರ್ಥವೂ ಆಗದು. ಆದುದರಿಂದಲೇ ತಂತ್ರಜ್ಞಾನವು ತನ್ನ ಉದ್ಧಾರವನ್ನು ತಾನೇ ಮಾಡಿಕೊಳ್ಳಲಾರದು. ಉದ್ಧಾರ ಎಂದರೆ ತನ್ನನ್ನು ತಾನು ಮೀರುವ ಕಲ್ಪನೆ. ಈಗಿನ ಕಲ್ಪನೆಗಿಂತ ಭಿನ್ನವಾದ ಬದಲಾದ ಕಲ್ಪನೆ. ಗುಣಾತ್ಮಕವಾಗಿ ಬದಲಾಗುವ ಕಲ್ಪನೆಯೇ ಇಲ್ಲದೆ ಇದ್ದುದು ತನಗೆ ಗೊತ್ತಿಲ್ಲದೆ ತನ್ನ ನಾಶವನ್ನು ತಾನೇ ಮಾಡಿಕೊಳ್ಳುವತ್ತ ನಡೆಯುತ್ತದಷ್ಟೆ.

ನಿಜ. Alternate technology, Inter Mediate Technology ಎಂಬ ನುಡಿಗಟ್ಟುಗಳನ್ನು ಕೇಳಿದ್ದೇವೆ. ಇದು ತಂತ್ರಜ್ಞಾನವು ಬದಲಾಗುತ್ತಿರುವ ಕಾಣ್ಕೆಯಲ್ಲವೆ ಎನ್ನುವ ಪ್ರಶ್ನೆ ಉಂಟಾಗುತ್ತದೆ. ಬದಲಾಗುತ್ತಿರುವ ಕಾಣ್ಕೆಯೂ ಹೌದು.  ಆದರೆ ಈ ಕಾಣ್ಕೆಗಳನ್ನು ಕಂಡವರು, E.F.Schumacher. ಇಂಗ್ಲೆಂಡ್ ಸರಕಾರದ ಪರವಾಗಿ Schumacher ಬರ್ಮಾದಲ್ಲಿ ಸಲಹೆಗಾರರಾಗಿದ್ದರು. ಅಲ್ಲಿ ತನ್ನ ಬಿಡುವಿನಲ್ಲಿ ಬುದ್ಧ ಧರ್ಮವನ್ನು ಅಧ್ಯಯನ ಮಾಡಿದರು. ಬುದ್ಧನ ಮಧ್ಯಮ ಮಾರ್ಗ ಎಂಬ ಪರಿಕಲ್ಪನೆ Schumacher ಅವರನ್ನು ಆವರಿಸಿತು. ಅದುವರೆಗೆ ಈ ದಿಕ್ಕಿನಲ್ಲಿ Schumacher ಚಿಂತಿಸಿರಲಿಲ್ಲ. ತಂತ್ರಜ್ಞಾನ; ಈಗಿರುವಂತೆಯೇ ತಾರಕ ಎಂದು ನಂಬಿದ್ದರು. ಯಾವಾಗ ಬುದ್ಧನನ್ನು ಓದಿದರೋ ಆಗ ಮಧ್ಯಮ ಮಾರ್ಗ ಎಂಬ ಹೊಳಹು, Schumacher ಪ್ರಜ್ಞೆಯಲ್ಲಿ ತನ್ನ ಒಳನೋಟವನ್ನು ಚೆಲ್ಲಿ, Intermediate Technologyಎಂಬ ಈಗ ಪ್ರಸಿದ್ಧವಾದ ನವೀನ ಪರಿಕಲ್ಪನೆಯಾಗಿ ಅರಳಿತು. ಇದು ನಿಜವಾಗಿ ಮಾಧ್ಯಮಿಕ ತಂತ್ರಜ್ಞಾನ! ಮೂರನೆಯ ಜಗತ್ತಿನ ದೇಶಗಳು ಎಂದು ಕರೆಯಲ್ಪಡುವ ದೇಶಗಳ ಪರಿಸ್ಥಿತಿಗೆ ಹೊಂದುವಂಥ ತಂತ್ರಜ್ಞಾನ ಯಾವುದು ಎಂಬ ಪ್ರಶ್ನೆಗೆ  ಈ ಪ್ರಶ್ನೆ ಹುಟ್ಟುವುದೇ ಮಾಧ್ಯಮಿಕ ಪ್ರಜ್ಞೆಯ ಫಲ Schumacher ಕಂಡುಕೊಂಡ ಉತ್ತರ.  ಈ ಉತ್ತರದ ಹಿಂದೆ ಬುದ್ಧನ ಧ್ಯಾನ ಇದೆ!

■ **ತೋಷ**

## ಮಾತೇ ಮುತ್ತು

★ ವಯಸ್ಸು 20 ಆಗಲಿ ಅಥವಾ 80 ಆಗಲಿ, ಕಲಿಕೆಯನ್ನು ನಿಲ್ಲಿಸಿದಾತನಿಗೆ ವಯಸ್ಸಾಗಿದೆ ಎಂದರ್ಥ. ಕಲಿಯುವವನು ಯಾವತ್ತಿದ್ದರೂ ಜವ್ವನಿಗ. ಮುಖ್ಯವಾಗಿ ನಿಮ್ಮ ಮನಸ್ಸಿನ ಯೌವ್ವನ ಕಾಪಾಡಿ.

–ಹೆನ್ರಿ ಫೋರ್ಡ್

★ ಹುಟ್ಟಿನಿಂದ ಯಾರೂ ಶ್ರೇಷ್ಠರಲ್ಲ, ಅವರ ಕೆಲಸದಿಂದ ಶ್ರೇಷ್ಠರು.

–ಚಾಣಕ್ಯ

★ ವೈಫಲ್ಯಕ್ಕೆ ಹಲವು ವಿಧಾನಗಳಿವೆ. ಆದರೆ ಯಶಸ್ಸಿಗೆ ಒಂದೇ ವಿಧಾನ.

–ಅರಿಸ್ಟಾಟಲ್

★ ಸೇಡು ತೀರಿಸಲು ಹೊರಡುವ ಮುನ್ನ ಎರಡು ಗೋರಿಗಳನ್ನು ತೆರೆದಿಟ್ಟುಕೊಳ್ಳಿ.

–ಕನ್‌ಫ್ಯೂಶಿಯಸ್

★ ಸಮಸ್ಯೆಗಳನ್ನು ಸೃಷ್ಟಿಸಿದಾಗ ಇದ್ದ ಆಲೋಚನೆಗಳನ್ನೇ ಇಟ್ಟುಕೊಂಡು ಸಮಸ್ಯೆಗಳನ್ನು ಬಗೆಹರಿಸಲು ಆಗುವುದಿಲ್ಲ.

–ಆಲ್ಬರ್ಟ್ ಐನ್‌ಸ್ಟೀನ್

★ ಬೆಳಕಿನಲ್ಲಿ ಒಬ್ಬರೇ ನಡೆಯುವುದಕ್ಕಿಂತ ಕತ್ತಲೆಯಲ್ಲಿ ಗೆಳೆಯನ ಜತೆಗೆ ನಡೆಯುವುದು ಒಳ್ಳೆಯದು.

–ಹೆಲನ್ ಕೆಲ್ಲರ್

★ ಸಾವಿರ ಟೊಳ್ಳು ಶಬ್ದಗಳಿಗಿಂತ ಶಾಂತಿಯನ್ನು ನೀಡುವ ಒಂದು ಶಬ್ದ ಸಾಕು.

–ಗೌತಮ ಬುದ್ಧ

★ ಈ ಕ್ಷಣದ ಬಗ್ಗೆ ಖುಷಿಯಾಗಿರು. ಈ ಕ್ಷಣವೇ ನಿನ್ನ ಬದುಕು.

–ಉಮರ್ ಖಯ್ಯಾಂ

★ ತಮಗೆ ತಾವೇ ಸಹಾಯ ಮಾಡಿಕೊಳ್ಳದವರಿಗೆ ನೀವು ಸಹಾಯ ಮಾಡುವ ಅಗತ್ಯವಿಲ್ಲ. ಮೇಲಕ್ಕೆ ಹತ್ತಲು ಬಯಸದವನ ಬಳಿ ಏಣಿ ತಂದು ಇಟ್ಟರೇನು ಪ್ರಯೋಜನ?

–ಡೇಲ್ ಕಾರ್ನೆಗಿ

★ ಒಮ್ಮೆ ನೀವು ನಿರ್ಧಾರ ತೆಗೆದುಕೊಳ್ಳಿ. ಆ ಬಳಿಕ ಇಡೀ ಜಗತ್ತೇ ಅದನ್ನು ಕಾರ್ಯರೂಪಕ್ಕೆ ತರಲು ಸಂಚು ಹೂಡುತ್ತದೆ.

–ರಾಲ್ಫ್ ಎಮರ್ಸನ್

★ ಕ್ರಾಂತಿ ಎಂದರೆ ಮರದಲ್ಲಿ ಮಾಗಿದ ಸೇಬು ಕೆಳಗೆ ಬಿದ್ದಂತಲ್ಲ. ನೀವೇ ಸೇಬನ್ನು ಕಿತ್ತು ತೆಗೆಯಬೇಕು.

–ಚೆ ಗವೇರ

★ ಒಂದು ಗಂಟೆ ವ್ಯರ್ಥ ಮಾಡಿದರೂ ಸಾಕು, ನಿಮಗೆ ಬದುಕಿನ ಮೌಲ್ಯ ಗೊತ್ತಿಲ್ಲ ಎಂದರ್ಥ.

–ಚಾರ್ಲ್ಸ್ ಡಾರ್ವಿನ್